ಶ್ರೀ ಬಾಬುರಾವ್ ಚವ್ಹಾಣ (ವಯಸ್ಕರ ಶಿಕ್ಷಣ, ಗ್ರಂಥಾಲಯಗಳು, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು)

ಅ) ಕೆ.ಸಿ.ಎಸ್.ಆರ್. ನಿಯಮ 68ರಲ್ಲಿ ಗರಿಷ್ಠ ಅವಧಿಯನ್ನು ನಿಗಧಿಪಡಿಸಿಲ್ಲ.

ಆ) ಕಾರವಾರದಲ್ಲಿ ಸೇವೆ ಸಲ್ಲಿಸುತ್ತಿರುವ ಅಧಿಕಾರಿಯು 5 ವರ್ಷದಿಂದ ಹಾಗೂ ಮಡಿಕೇರಿಯಲ್ಲಿ ಸೇವೆ ಸಲ್ಲಿಸುತ್ತಿರುವ ಅಧಿಕಾರಿಯು 3 ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ.

ಇ) ಇಲ್ಲ.

ಈ) 'ಇ' ಗೆ ನೀಡಿರುವ ಉತ್ತರದಿಂದ ಉದ್ಭವಿಸುವುದಿಲ್ಲ.

ಶಿವಾಜಿನಗರದಲ್ಲಿರುವ ಸರ್ ಹಾಜಿ ಇಸ್ಮಾಯಿಲ್ ಸೇತ್ ಗೋಷಾ ಆಸ್ಪತ್ರೆಯನ್ನು ಭೋದಕ ಆಸ್ಪತ್ರೆಯಾಗಿ ಪರಿವರ್ತನೆ

4528 (4801) : ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಾಜಿನಗರ ವಿಧಾನಸಭಾ ಕ್ಷೇತ್ರದಲ್ಲಿರುವ ಸರ್ ಹಾಜಿ ಇಸ್ಮಾಯಿಲ್ ಸೇಟ್ ಗೋಷಾ ಆಸ್ಪತ್ರೆಯಲ್ಲಿ ಉಪಕರಣಗಳು ಹಾಗೂ ಇತರ ಮೂಲಭೂತ ಸೌಕರ್ಯಕ್ಕಾಗಿ 2002–03ರಲ್ಲಿ ಖರ್ಚು ಮಾಡಿದ ಹಣವೆಷ್ಟು?

ಆ) ಈ ಆಸ್ಪತೆಯನ್ನು ಪೂರ್ಣ ಪ್ರಮಾಣದ ಮಹಿಳಾ ಆಸ್ಪತ್ರೆಯನ್ನಾಗಿ ಪರಿವರ್ತಿಸಿ ಬೋಧಕ ಆಸ್ಪತ್ರೆಯೆಂದು ಘೋಷಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) 2002–03ನೇ ಸಾಲಿನಲ್ಲಿ ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಇವರು ಒದಗಿಸಿರುವ ರೂ. 48,000/– ಮೊತ್ತದಲ್ಲಿ ಈ ಆಸ್ಪತ್ರೆಯಲ್ಲಿ ಸುಟ್ಟು ಹೋಗಿರುವ ಕೇಬಲ್ ತಂತಿ ಬದಲಾಯಿಸಿದೆ. ಮಕ್ಕಳ ವಾರ್ಡ್‌ನಲ್ಲಿ ಹೊಸ ಸ್ವಿಚ್‌ಗಳನ್ನು ಅಳವಡಿಸಲಾಗಿದೆ ಮತ್ತು ಹೆರಿಗೆ ವಾರ್ಡ್‌ನಲ್ಲಿ ಒಂದು ಗೀಸರ್ ಒದಗಿಸಲಾಗಿದೆ.

ಆ) ಇಂತಹ ಪ್ರಸ್ತಾವನೆ ಇರುವುದಿಲ್ಲ.

ಕರ್ನಾಟಕ ಹೋಮಿಯೋಪತಿ ಪ್ರಾಕ್ಟಿಷನರ್ಸ ಬೋರ್ಡ್ ರದ್ಧತಿ

4529 (4803) : ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರ್ನಾಟಕ ಹೊಮಿಯೋಪತಿ ಪ್ರಾಕ್ಟೀಷನರ್ಸ್ ಬೋರ್ಡ್ ಇಲ್ಲಿಯವರೆಗೆ ನೋಂದಾವಣೆ ಮಾಡಿ ಕೊಂಡಿರುವ ಹೋಮಿಯೋಪತಿ ವೈದ್ಯರ ಸಂಖ್ಯೆ ಎಷ್ಟು;

ಆ) ಜನವರಿ 2002 ರಿಂದ ಜೂನ್ 2003ರ ವರೆಗೆ ಎಷ್ಟು ಹೋಮಿಯೋಪತಿ ವೈದ್ಯರನ್ನು ಹೊಸದಾಗಿ ನೋಂದಾಯಿಸಿಕೊಳ್ಳಲಾಗಿದೆ;

ಇ) ಇದರಿಂದ ಬಂದ ಶುಲ್ಕವೆಷ್ಟು;

ಈ) 2002–03ನೇ ಸಾಲಿನಲ್ಲಿ ಸರ್ಕಾರ ಈ ಮಂಡಳಿಗೆ ನೀಡಿದ ಅನುದಾನವೆಷ್ಟು;

ಉ) ಈ ಬೋರ್ಡಿಗೆ ರಿಜಿಸ್ಟ್ರಾರ್ ರವರನ್ನು ನೇಮಕ ಮಾಡಲಾಗಿದೆಯೇ;

ಊ) ಹಾಗಿದ್ದಲ್ಲಿ, ರಿಜಿಸ್ಟ್ರಾರ್ ರವರಿಗೆ ನೀಡುವ ಸಂಬಳ, ಭತ್ಯೆ ಎಷ್ಟು;

ಋ) 2002–03ರಲ್ಲಿ ಈ ಬೋರ್ಡಿನ ಅಧ್ಯಕ್ಷರು ಪಡೆದುಕೊಂಡ ಸಂಭಾವನೆ, ದೂರವಾಣಿ ಖರ್ಚು ಮತ್ತು ಪ್ರವಾಸ ಭತ್ಯೆ ಎಷ್ಟು;

ಎ) ಈ ಬೋರ್ಡ್‌ನ್ನು ರದ್ದುಗೊಳಿಸಿ ಅಧಿಕಾರವನ್ನು ನಿರ್ದೇಶಕರಿಗೆ ನೀಡಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ?

ಶ್ರೀಮತಿ ನಫೀಸ್ ಫಜಲ್ (ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ರಾಜ್ಯ ಸಚಿವರು)

ಅ) 7,672

ಆ) 158 ವೈದ್ಯರು.

ಇ) ರೂ. 2,36,600–00

ಈ) ಅನುದಾನ ನೀಡಿಲ್ಲ.

ಉ) ಅಧಿಕ ಪ್ರಭಾರದ ಮೇರೆಗೆ ನೇಮಕ ಮಾಡಲಾಗಿದೆ.

ಊ) ಇಲ್ಲ.

ಋ) ಸಂಭಾವನೆ – ರೂ. 71,400–00

ದೂರವಾಣಿ ವೆಚ್ಚ – ರೂ. 12,121–00

ಪ್ರವಾಸ ಭತ್ಯೆ – ಇಲ್ಲ.

ಎ) ಇಲ್ಲ.

ಬೆಂಗಳೂರಿನ ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ನಡೆಸಿದ ತೆರೆದ ಶಸ್ತ್ರ ಚಿಕಿತ್ಸೆಗಳು

4530 (5144) : ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರಿನ ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ಜನವರಿ 2002 ರಿಂದ ಏಪ್ರಿಲ್ 2003 ರವರೆಗೆ ಎಷ್ಟು ತೆರೆದ ಶಸ್ತ್ರ ಚಿಕಿತ್ಸೆ ಹಾಗೂ ಇತರ ಚಿಕಿತ್ಸೆಗಳನ್ನು ನಡೆಸಲಾಯಿತು.

ಆ) ಮೇಲ್ಕಂಡ ಅವಧಿಯಲ್ಲಿ ಬಂದ ಹೊರ ರೋಗಿಗಳ ಸಂಖ್ಯೆ ಎಷ್ಟು ಹಾಗೂ ಒಳರೋಗಿಗಳ ಸಂಖ್ಯೆ ಎಷ್ಟು;

ಇ) ಈ ಆಸ್ಪತ್ರೆಯಲ್ಲಿರುವ ಹಾಸಿಗೆಗಳೆಷ್ಟು;

ಈ) ಈ ಹಾಸಿಗೆಗಳು ಯಾವಾಗಲೂ ಪೂರ್ತಿಯಾಗಿ ಉಪಯೋಗವಾಗಿರುತ್ತದೆಯೆ;

ಉ) ಮೇಲ್ಕಂಡ ಅವಧಿಯಲ್ಲಿ ಎಷ್ಟು ಬಡರೋಗಿಗಳಿಗೆ ಉಚಿತವಾಗಿ ವೈದ್ಯಕೀಯ ಸೌಲಭ್ಯ ಒದಗಿಸಲಾಯಿತು.

ಊ) ಈ ಆಸ್ಪತೆಯಲ್ಲಿ ಜನತಾ ಬಜಾರ್‌ನ ಔಷಧ ಮಳಿಗೆಯನ್ನು ಪ್ರಾರಂಭಿಸಲಾಗಿದೆಯೆ?

ಡಾ. ಎ.ಬಿ. ಮಾಲಕರೆಡ್ಡಿ (ವೈದ್ಯಕೀಯ ಶಿಕ್ಷಣ ಸಚಿವರು)

ಅ) 1189.

ಆ) ಹೊರ ರೋಗಿಗಳ ಸಂಖ್ಯೆ : 141564

ಒಳ ರೋಗಿಗಳ ಸಂಖ್ಯೆ : 15988